**CC 175/2018 (PW-1)**

<u>ಮಧ್ಯಂತರ ಅರ್ಜಿ ಆದೇಶ ದಿಃ 27-01-2026 ರ ಮೇರೆಗೆ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ :-</u>

ಮಲ್ಲಾಬಾದ ಗ್ರಾಮ ಪಂಚಾಯತಿಯ 2013-14 ನೇ ಸಾಲಿನ ಗುತ್ತಿಗೆದಾರನ ಖಾತೆಯಿಂದ ಅಶೋಕ ಬಬಲೇಶ್ವರ ಎನ್ನುವವರಿಗೆ ಖಾತೆಗೆ ಹಣ ವರ್ಗಾವಣೆ ಆದ ಕುರಿತು ತೋರಿಸುವ ಖಾಸಾ ವಿವರಣಾ ಪಟ್ಟಿ ಹಾಜರುಪಡಿಸಿದ್ದು ಅದನ್ನು ಈಗ ನಿಪಿ **-195** ಎಂದು ಗುರುತಿಸಲಾಯಿತು.

ಮಲ್ಲಾಬಾದ ಗ್ರಾಮ ಪಂಚಾಯತಿಯ 2013-14 ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕೆಲಸ ಮಾಡಿದ ಕೂಲಿಕಾರ್ಮಿಕರ ಜಾಬಕಾರ್ಡಗಳ ಪಟ್ಟಿ ಹಾಜರುಪಡಿಸಿದ್ದು ಅದನ್ನು ಈಗ ನಿಪಿ **-196** ಎಂದು ಗುರುತಿಸಲಾಯಿತು.

ಮಲ್ಲಾಬಾದ ಗ್ರಾಮ ಪಂಚಾಯತಿಯ 2013-14 ನೇ ಸಾಲಿನ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ 148 ಪುಟಗಳ ವರದಿಯನ್ನು ಹಾಜರುಪಡಿಸಿದ್ದು ಅದನ್ನು ಈಗ ನಿಪಿ-**197** ಎಂದು ಗುರುತಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ಶ್ರೀ. **KDP** ವಕೀಲರಿಂದ:

ನಮೂನೆ-32 ನೇದನ್ನು ಗುತ್ತಿಗೆದಾರರು ತಯಾರಿಸಿ PDO ಮತು JE ರವರ ಅನುಮತಿ ಪಡೆದು ಬಿಲ್ ಪಾವತಿ ಮಾಡುತ್ತಾರೆ. ಕ್ರಿಯಾ ಯೋಜನೆ ತಾಲೂಕ ಪಂಚಾಯತಿ ಆಡಳಿತ ಅಧಿಕಾರಿಯವರ ಅನುಮೋದನೆ ನಂತರ ಜಿಲ್ಲಾ ಪಂಚಾಯತಿಗೆ ಅನುಮೋದನೆಗೆ ಕಳುಹಿಸಿರುತ್ತಾರೆ. ಕ್ರಿಯಾ ಯೋಜನೆಯೂ ಕೈಬರಹದಲ್ಲಿ ಇರುತ್ತದೆ ಅದು ಡಿಜಿಟಲ ಇರಲಿಲ್ಲ. ವಿಶೇಷ ಅನುದಾನ ಇದ್ದ ಸಂದರ್ಭದಲ್ಲಿ ಮಾತ್ರಾ ನಾವು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರ ಅನುಮೋದನೆಗೆ ಕಳುಹಿಸುತ್ತೇವೆ. ಚಾಸಾ 13 ರವರು CEO ಆಗಿ ಇದ್ದಾಗ ಈ ಘಟನೆ ಆಗಿರುತ್ತದೆ ಎಂದರೆ ಸರಿ. ಈ ಘಟನೆ ಆದಾಗ ಚಾಸಾ-12 ರವರು ನರೇಗ ಯೋಜಜನೆ ನೋಡಲ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದರು ಎಂದರೆ ಸರಿ. ಆಗ 5 ನೇ ಆರೋಪಿಯೂ JE ಅಂತ ಕರ್ತವ್ಯ ನಿರ್ವಹಿಸುತ್ತಿದ್ದನು.

ನಮೂನೆ-1 ಕಾರ್ಮಿಕರು ಉದ್ಯೋಗ ಕೋರಿ ಅರ್ಜಿ ಸಲಿಸಿದ್ದು ಇರುತ್ತದೆ. ಅರ್ಜಿಯನ್ನು ನಮೂನೆ-6 ರಲ್ಲಿ ಸಲ್ಲಿಸಬೇಕಾಗುತ್ತದೆ. ನಮೂನೆ-6 ರ ಅರ್ಜಿ ಪುರಸ್ಕರಿಸಿದಾಗ ನಮೂನೆ-8 ಹೊರಡಿಸಲಾಗುತ್ತದೆ. ಏಜೆನ್ಸಿಗೆ ನಮೂನೆ-6 ನೀಡಲಾಗುವುದಿಲ್ಲ. ಮತ್ತು PDO ರವರು ಆಯಾ ಕಾಮಗಾರಿಗಳಲ್ಲಿ ಟೆಂಡರ ಪ್ರಕಟಣೆ ಮಾಡಿ ಏಜೆನ್ಸಿಗಳಿಗೆ ಕೆಲಸ ನೀಡಿರುತ್ತಾರೆ. ಕ್ರಿಯಾ ಯೋಜನೆ ಅನುಮೋದಿಸಿದ ತಕ್ಷಣ ಏಜೆನ್ಸಿಯವರ ಖಾತೆಗೆ ಹಣ ಜಮಾ ಆಗುತ್ತದೆ ಎಂದರೆ ಸರಿಯಲ್ಲ. ನಮೂನೆ-6 ರಲ್ಲಿ ಉದ್ಯೋಗ ಚೀಟಿ ಸಂಖ್ಯೆ, ವೈಯಕ್ತಿಕ ಸಂಖ್ಯೆ ಮತ್ತು ವಿಳಾಸ ಒಳಗೊಂಡಿರುತ್ತದೆ ಎಂದರೆ ಸರಿ. ನಾನು ವೈಯಕ್ತಿಕವಾಗಿ ಉದ್ಯೋಗ ಚೀಟಿದಾರರಿಗೆ ಭೇಟಿ ಮಾಡಿ ಮಾಹಿತಿ ಪಡೆದಿರುವುದಿಲ್ಲ.

ನರೇಗಾ ಯೋಜನೆಯಲ್ಲಿ ತಾತ್ಕಾಲಿಕ ಮತ್ತು ಶಾಶ್ವತ ಎರಡು ಬಗೆಯ ಕಾಮಗಾರಿಗಳು ಇರುತ್ತವೆ. 60:40 ಅಂದರೆ 60 ಪ್ರತಿಶತ ಕಾರ್ಮಿಕರಿಗೆ 40 ಪ್ರತಿಶತ ಕಚ್ಚಾವಸ್ತುಗಳಿಗೆ ಖರ್ಚು ಮಾಡಲಾಗಿರುತ್ತದೆ. 40 ಪ್ರತಿಶತ ಹಣ ಕಾಮಗಾರಿ ಪೂರ್ಣಗೊಂಡ ನಂತರ ಅದನ್ನು ಪಡೆದ ಏಜೆನ್ಸಿಯವರ ಖಾತೆಗೆ ಹಣ ಜಮಾ ಆಗುತ್ತದೆ. ಈ ಘಟನೆ ಆದಾಗ ನಾನು ತಾಲೂಕಾ ಕಾರ್ಯ ನಿರ್ವಾಹಕ ಅಧಿಕಾರಿ ಆಗಿದೆ ಎಂದರೆ ಸರಿ. ಉದ್ಯೋಗ ಖಾತರಿ ಯೋಜನೆ ಅಲ್ಲಿ ಟೆಂಡರ ಹೊರಡಿಸಲು ಬರುವುದಿಲ್ಲ ಎಂದರೆ ಸಾಕ್ಷಿಯೂ 40 ಪ್ರತಿಶತ ಕಚ್ಚಾ ಸಾಮಾಗ್ರಿಗೆ ಟೆಂಡರ ಪ್ರಕಟಣೆ ಮಾಡುವುದು ಇರುತ್ತದೆ ಎಂದು ನುಡಿಯುತ್ತಾರೆ. ಹೆಚ್ಚುವರಿ ಕ್ರಿಯಾ ಯೋಜನೆಗೆ ತಾಲೂಕ ಪಂಚಾಯತಿ E.O, ಜಿಲ್ಲಾ ಪಂಚಾಯತಿ CEO ಮತ್ತು DS ರವರು ಮಾತ್ರಾ ಅಧಿಕಾರ ಹೊಂದಿರುತ್ತಾರೆ ಎಂದರೆ ಸಾಕ್ಷಿ ಗ್ರಾಮ ಪಂಚಾಯತಿ ಯವರು ಹೆಚ್ಚುವರಿ ಕಾಮಗಾರಿ ಬೇಡಿಕೆ ಇಟ್ಟಲ್ಲಿ ಮುಂದಿನ ಪ್ರಕ್ರಿಯೆ ತೆಗೆದುಕೊಳ್ಳಲಾಗುತ್ತದೆ. 1 ಲಕ್ಷದ ಹೆಚ್ಚಿನ ಮೌಲ್ಯದ ಕಾಮಗಾರಿ ಇದ್ದ ಪಕ್ಷದಲ್ಲಿ ಅವುಗಳ ಅಳತೆ ಮತ್ತು ಬಿಲ ಪರಿಶೀಲನೆ ಮಾಡುವ ಹೊಣೆ ತಾಲೂಕ ಪಂಚಾಯತಿ E.O ರವರು ಅಧಿಕಾರ ಹೊಂದಿರುತ್ತಾರೆ ಎಂದರೆ ಸರಿಯಲ್ಲ. 1 ಲಕ್ಷದ ಹೆಚ್ಚಿನ ಮೌಲ್ಯದ ಕಾಮಗಾರಿ ಇದ್ದ ಪಕ್ಷದಲ್ಲಿ ಅವುಗಳ ಅಳತೆ ಮತ್ತು ಬಿಲ ಪರಿಶೀಲನೆ ಮಾಡುವ ಹೊಣೆ PDO, J.E. ಮತ್ತು ಪಂಚಾಯತ ರಾಜ ಇಲಾಖೆಯ ಇಂಜಿನಿಯವರ ರವರಿಗೆ ಅಧಿಕಾರ ವ್ಯಾಪ್ತಿ ಇರುತ್ತದೆ. ನನ್ನ ವರದಿ ಆದಾರದ ಮೇರೆಗೆ J.E. ಮತ್ತು CEO ರವರು ಬಿಲ್ಲುಗಳನ್ನು ಪಾಸು ಮಾಡುತ್ತಾರೆ ಎಂದರೆ ಸರಿಯಲ್ಲ. ಹೆಚ್ಚುವರಿ ಕ್ರಿಯಾ ಯೋಜನೆಯಲ್ಲಿ CEO, E.O ರವರು ಖರ್ಚು ಮಾಡುವ ಅಧಿಕಾರ ಇದೆ ಎಂದರೆ ಸರಿಯಲ್ಲ.

MSI ಸಂಯೋಜಕರನ್ನು PDO ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರು ಗ್ರಾಮಕ್ಕೆ ಕರೆದು ಕಾಮಗಾರಿ ಕುರಿತು ಡಂಗೂರ ಸಾರಿ ಸಭೆ ಸೇರಿಸಿ ಸಾರ್ವಜನಿಕರಿಂದ ಕಾಮಗಾರಿ ಕುರಿತು ಅಭಿಪ್ರಾಯ ಪಡೆಯಬೇಕಾಗುತ್ತದೆ. ಕಾರ್ಮಿಕರಿಗೆ ಸಂಬಂಧಿಸಿದ ಬಿಲ ಪಾವತಿ PDO ರವರು ಮಾಡಬಹುದು ಮತ್ತು ಕಚ್ಚಾ ಸಾಮಾಗ್ರಿಗೆ ಸಂಬಂಧಿಸಿದ ಬಿಲ ಪಾವತಿಯನ್ನು ತಾಲೂಕಾ ಪಂಚಾಯತಿಯಿ ಲಾಗಿನನಿಂದ ಜಿಲ್ಲಾ ಪಂಚಾಯತಿ ಲಾಗಿನಗೆ ಹೋಗುತ್ತದೆ. PDO ರವರು ಕೈಗೊಂಡ ನರೇಗ ಕಾಮಗಾರಿಗೆ ಮೇಲುಸ್ತುವಾಗಿ ಆಗಿ E.O, CEO ಮತ್ತು

DS ರವರು ಇರುತ್ತಾರೆ. ನರೇಗ ಕಾಮಗಾರಿಯ ಸಂಬಂಧಿಸಿದ ಮಾಹಿತಿಯನ್ನು ನಾವೇ ನೋಡಿಕೊಳ್ಳುತ್ತೇವೆ.

ಅನುಷ್ಠಾನಗೊಂಡ ಕಾಮಗಾರಿಗಳಿಗೆ NMR, ಅಂದಾಜು ಪತ್ರಿಕೆಕ ಹೊರತುಪಡಿಸಿ ಮುಖ್ಯವಾಗಿ ಬೇಕಾಗುವ ದಾಖಲೆಗಳು ನಮೂನೆ-6, 8, 9, PWD-32 ಅವಶ್ಯವಾಗಿ ಬೇಕಾಗುತ್ತದೆ. PDO ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರು ತಯಾರಿಸಿದ ಕ್ರಿಯಾಯೋಜನೆಯಾ E.O, CEO ಮತ್ತು DS ರವರ ಅನುಮೋದನೆಗೊಂಡ ನಂತರ ಕಾಮಗಾರಿ ಪ್ರಾರಂಭಗೊಳ್ಳುತ್ತದೆ ಎಂದರೆ ಸರಿ. ಕಾರ್ಮಿಕರ ಚೀಟಿ, ಜಾಬಕಾರ್ಡ ಹಾಜರಾತಿ ದಾಖಲಾತಿ ಡಿಜಿಟಲ ಇರುವುದರಿಂದ ಅವರಿಗೆ ಸಂದಾಯ ಆಗಬೇಕಾದ ಕೂಲಿ ಹಣ ನೇರವಾಗಿ ಅವರ ಖಾತೆಗೆ ಜಮಾ ಆಗುತ್ತದೆ ಎಂದರೆ ಸಾಕ್ಷಿ PDO ಮತ್ತು ಅಧ್ಯಕ್ಷರು ಅನುಮೋದಿಸಿದ ನಂತರ ಸಂದಾಯ ಆಗುತ್ತದೆ ಎಂದು ನುಡಿಯುತ್ತಾರೆ. ಪ್ರತಿಯೆಂದು ನರೇಗ ಕಾಮಗಾರಿಗೆ ಒಬ್ಬರು ಸೆಕ್ಷನ ಆಫೀಸರ ಅಂತ ಇರುತ್ತಾರೆ ಎಂದರೆ ಸರಿ. ಈ ಘಟನೆ ಆದಾಗ ಸೆಕ್ಷನ ಆಫೀಸರ ಅಬ್ದುಲ ಫಜಲ ಮತ್ತು ನಾಗೋಜಿ ಎಂಬ ಇಬ್ಬರು ಜನರು ಇದ್ದರು. ನಾಗೋಜಿ ಎನ್ನುವವರು ಈ ಘಟನೆ ಘಟಿಸುವ ನಂತರ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ ಎಂದರೆ ಸರಿಯಲ್ಲ. ಸೆಕ್ಷನ ಆಫೀಸರಿಗೆ MB Record, BILL Record, Estimate Record ಮಾಡುವ ಅಧಿಕಾರ ಇರುತ್ತದೆ ಎಂದರೆ ಸರಿ.

ಈ ಘಟನೆ ಆದಾಗ ಚಾಸಾ 12 ರವರು ನೋಡಲ ಅಧಿಕಾರಿ ಇದ್ದು ಅವರ ಕಾರ್ಯ ವ್ಯಾಪ್ತಿಯೂ ಉದ್ಯೋಗ ಖಾಸರಿ ಯೋಜನೆಯಲಿ ಅವ್ಯವಹಾರ ಆಗದಂತೆ ನೋಡಿಕೊಳ್ಳುವುದು ಇರುತ್ತದೆ. ಪ್ರತಿಯೊಂದು ಕಾಮಗಾರಿಗೆ 3 ಹಂತರ ಲೆಕ್ಕಪರಿಶೋದನೆ ಆಗುತ್ತದೆ ಎಂದರೆ ಸರಿ. ಪ್ರತಿಯೊಂದು ಕಾಮಗಾರಿಯ ಲೆಕ್ಕಪರಿಶೋದನೆ ಆಯಾ ಪಂಚಾಯತಿ ಅಧಿಕಾರಿಯ ಕಾರ್ಯ ಅಗಿರುತ್ತದೆ. ನಮ್ಮ ಕಚೇರಿಯಿಂದ 01 ಎಪ್ರಿಲದಿಂದ ಜೂನ ತಿಂಗಳವರೆಗೆ ಆಯಾ ಗ್ರಾಮ ಪಂಚಾಯತಿಯವರು ಲೆಕ್ಕಪರಿಶೋದನೆ ವರದಿ ಸಲ್ಲಿಸುತ್ತಾರೆ. ಸಲ್ಲಿಸದೇ ಇದ್ದ ಪಕ್ಷದಲ್ಲಿ ನಮ್ಮ ಕಚೇರಿಯಿಂದ ನೋಟಿಸ ನೀಡಲಾಗುತ್ತದೆ.

ಮಲ್ಲಾಬಾದ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ವಿಶೇಷ ಲೆಕ್ಕಪರಿಶೋದನೆ ವರದಿಯನ್ನು ನಾನು ಮಾಡಿಸಿರುವುದಿಲ್ಲ. ಜಿಲ್ಲಾ ಪಂಚಾಯತಿಯವರು ಮಾಡಿಸಿರುತ್ತಾರೆ.

ಸದರಿ ವರದಿಯನ್ನು ನಾನು ನೋಡಿರುವುದಿಲ್ಲ. ಸದರಿ ವರದಿ ಸಲ್ಲಿಸಿದಾಗ ನಾನು ಬೇರೆ ಇಲಾಖೆಗೆ ವರ್ಗಾವಣೆ ಗೊಂಡಿರುತ್ತೇನೆ. ಮಾರ್ಚ 2014 ರಲ್ಲಿ ನಾನು ವರ್ಗಾವಣೆ ಗೊಂಡಿರುತ್ತೇನೆ. ನಾನು ನೀಡಿದ ದೂರು Quantum of Amount ಗೆ ಸಂಬಂಧಿಸಿರುತ್ತದೆ. ಕಡತಕ್ಕೆ ಅಲ್ಲ. ನನ್ನ ಮೇಲಾಧಿಕಾರಿಯವರು ಹಣದ ಅವ್ಯವಹಾರ ಮೇಲೆ ನೀಡಿದ ನಿರ್ದೇಶನ ಮೇರೆಗೆ ನಾನು ದೂರು ನೀಡಿರುತ್ತೇನೆ. ನರೇಗಾಗೆ ಸಂಬಂಧಿಸಿದ ಖಾತೆಗಳನ್ನು DS ರವರು ಪ್ರತಿದಿನ ಪರಿಶೀಲನನೆ ಮಾಡುತ್ತಾರೆ. ನರೇಗ ಖಾತೆಯಲ್ಲಿ 49,99,999/- ಮಿತಿ ದಾಟಿದ ತಕ್ಷಣ ಖಾತೆಯೂ ಫ್ರೀಜ ಆಗುತ್ತದೆ ಎಂದರೆ ಸಾಕ್ಷಿ ಕಚ್ಚಾ ಸಾಮಾಗ್ರಿ ಸಂಬಂಧಿಸಿದಲ್ಲಿ ಮಾತ್ರಾ ಆಗುತ್ತದೆ. ಕಾರ್ಮಿಕರಿಗೆ ಸಂಬಂಧಿಸಿದಲ್ಲಿ ಆಗುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಹಣವು ಒಂದು ವಾರದಲ್ಲಿ ಪರಿಮಿತಿ ದಾಟಿದರೆ ಆ ಖಾತೆ ಫ್ರೀಜ ಆಗುತ್ತದೆ ಎಂದರೆ ಸಾಕ್ಷಿ ಅದು ನನ್ನ ಮೇಲಾಧಿಕಾರಿ ಅಧೀನದಲ್ಲಿ ಇರುತ್ತದೆ ಆದರಿಂದ ನನಗೆ ಮಾಹಿತಿ ಇಲ್ಲ. ZP ಅಲ್ಲಿ 2013-14 ನೇ ಸಾಲಿನಲ್ಲಿ 136.64 ಕೋಟಿ ರೂ. ಆನಲೈನ ಪೇಮೆಂಟ ಆಗಿದೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಹೇಳಿದ ಮೊತ್ತ ಅಫಜಲಪುರದಲ್ಲಿ ಆದ ಕಾಮಗಾರಿಗಳ ಮೊತ್ತಕ್ಕೆ ಸಂಬಂಧಿಸಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಈ ಸಮಯದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು

ಅಫಜಲಪೂರ